## ಕಳೆದ ಸಂಚಿಕೆಯಲ್ಲಿ



ಅಮ್ಮುವಿನ ಮಲತಾಯಿ ವಿಜಯಮ್ಮನವರನ್ನು ಮಾತನಾಡಿಸಿದ ಮಾಯಣ್ಣನಿಗೆ ಅಮೃತಾಳ ಹೊಸ ಮುಖವೊಂದರ ಪರಿಚಯವಾಯಿತು. ಆ ಮಾತುಕತೆಯಲ್ಲಿ, ತಾಯಿಯನ್ನು ಕಳೆದುಕೊಂಡ ಅಮ್ಮು ಬಾಲ್ಯದಲ್ಲೇ ಗಾಂಭೀರ್ಯವನ್ನು ರೂಢಿಸಿಕೊಂಡಿದ್ದುದು ತಿಳಿಯಿತು. ಅಮೃತಾಳ ಬಾಲ್ಯದಲ್ಲಿ ಸಿಹಿ ನೆನಪುಗಳಿಂತಲೂ ಕಹಿ ನೆನಪುಗಳೇ ಗಾಢವಾಗಿದ್ದಂತಿತ್ತು. ತನ್ನ ಸಹೋದರ ರವಿಯ ಬಗ್ಗೆ ವಿಜಯಮ್ಮ ಒಳ್ಳೆಯ ಮಾತುಗಳನ್ನಾಡದೆ ಹೋದುದನ್ನೂ ಮಾಯಣ್ಣ ಗಮನಿಸಿದ. ಕಾಫಿ ಎಸ್ಟೇಟ್ ಮಾಲೀಕ ಗಣಪತಿ ಅವರ ಭೇಟಿಯಿಂದಲೂ ಹೆಚ್ಚಿನ ಉಪಯೋಗವಾಗಲಿಲ್ಲ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು, ತಮ್ಮ ಆಸ್ತಿಯನ್ನೆಲ್ಲ ಸಂಸ್ಥೆಯೊಂದಕ್ಕೆ ದಾನ ಮಾಡಿದ್ದರು. ಸಾವಿನ ಅಂಚಿನಲ್ಲಿರುವ ಮನುಷ್ಯ ಕೊಲೆ ಮಾಡುವ ಸಾಧ್ಯತೆಯಿರಲಿಲ್ಲ. ಈಗ ಮಾಯಣ್ಣನ ಅನುಮಾನ ರವಿಯತ್ತ ಬಲಗೊಂಡಿತು. ರವಿಯ ಕೋಣೆಯಲ್ಲಿ, ಅಮೃತಾಳೊಂದಿಗೆ ಅವನ ಮದುವೆ ನಡೆದಂತೆ ಸೃಷ್ಟಿಸಿದ್ದ ನಕಲಿ ದಾಖಲೆ ದೊರೆಯಿತು. ಇಡೀ ಪ್ರಕರಣವನ್ನು ಬೇರೊಂದು ದಿಕ್ಕಿನಲ್ಲಿ ನೋಡಲು ಮಾಯಣ್ಣನಿಗೆ ಸಾಕ್ಷ್ಯವೊಂದು ಲಭಿಸಿತ್ತು.

‘ನಮ್ಮಪ್ಪನ ಜಯಂತಿ’.

‘ಓ... ಹಂಗೇಳು... ಹೆಂಗ್ ಬಂತಪ್ಪ ನಿಮ್ಮಪ್ಪಂಗೆ ಇಷ್ಟೊಂದು ಕಲ್ಯಾಣ ಗುಣಗಳು ಅಂತ ಇದ್ದೆ...’

‘ನಮ್ಮಪ್ಪನ ಆಡ್ಕೋಬೇಡಿ... ಇವತ್ತು ನಮ್ಮಪ್ಪನ ಹೆಸರು ಯೇಳ್ಕೊಂಡು ಎಷ್ಟೋ ಜನ ಅವರ ಮನೆ ದೀಪ ಹಚ್ತಾರೆ ಗೊತ್ತಾ?’

‘ಏನುಕ್ಕೋ...’

‘ಹೊಸ ಇನ್ಸ್‌ಪೆಕ್ಟರ್ ಬರೋದುಕ್ ಮುಂಚೆ, ಬರೇ ಎರಡು ತಿಂಗಳು ನಮ್ಮಪ್ಪ ಸ್ಟೇಷನ್ ಇನ್‌ಚಾರ್ಜ್ ಅಂತ ಇದ್ದಿದ್ದು... ಬೆನಕ ರೋಡ್ ಫುಟ್ ಪಾತ್ ಪೂರ್ತಿ, ತರಕಾರಿ ಅಂಗಡಿ, ಅಣ್ಣಂಗಡಿ ಆಕ್ಕೊಳಕೆ ಪರ್ಮಿಷನ್ ಕೊಟ್ಟಿದ್ದೇ ನಮ್ಮಪ್ಪ... ಎಲ್ರೂ ರಾತ್ರೋರಾತ್ರಿ ಸಾಲಾಗಿ ಗೂಡಂಗಡಿ ಕಟ್ಕೊಂಬಿಟ್ರು... ಅಷ್ಟೇ ಯಾಕೆ, ಆ ತಾಲೂಕ್ ಆಫೀಸ್ ಮೂಲೇಲಿ ಕಾಂಪೌಂಡ್ ಗೋಡೆ ಬಿದ್ದೋಗಿತ್ತಲ್ಲ, ಅಲ್ಲಿ ಮೆಕಾನಿಕ್ ಶಾಪ್ ಆಕ್ಕೊಳಕ್ಕೆ ಪರ್ಮಿಷನ್ ಕೊಟ್ಟಿದ್ದು ನಮ್ಮಪ್ಪನೇ... ಅದುಕ್ ಮುಂಚೆ ಪೋಲಿ ಪುಂಡ್ರು, ಇವರನ್ನೆಲ್ಲ ರೋಲ್ ಕಾಲ್ ಮಾಡ್ಕೊಂಡಿದ್ರು... ಆಮೇಲೆ ಒಂದು ಶಿಸ್ತು ಅಂತ ಬಂತು... ತಿಂಗಳ ತಿಂಗಳ ಇಷ್ಟು ಅಂತ ಫಿಕ್ಸ್ ಮಾಡಿ... ಅವ್ರೇ ಟೋಟಲ್ ಕಲೆಕ್ಟ್ ಮಾಡ್ಕೊಂಡು, ಅವ್ರೇ ಸ್ಟೇಷನ್‌ಗೆ ತಂದು ಕೊಡವ್ರು’.

‘ಮತ್ತೆ ಜನ್ರು ಓಡಾಡಕೆ ಫುಟ್‌ಪಾತು?’

‘ಗೊತ್ತಲ್ಲ ನಮ್ ಜನ, ಫುಟ್‌ಪಾತ್ ಮೇಲೆ ಚಿನ್ನದ ತಗಡು ವೊಡುಸುದ್ರೂ ಓಡಾಡೋದು ರೋಡ್ ಮೇಲೇನೇ’.

‘ಪುಣ್ಯಾತ್ಮ ನಿಮ್ಮಪ್ಪ... ಬೇಗನೆ ಕರ್ಕೊಂಡ್ ಬಿಟ್ಟ ಭಗವಂತ.... ಇಲ್ಲಾ ಅಂದ್ರೆ ಇನ್ನು ಏನೇನು ಮಾಡ್ತಿದ್ನೋ...’

‘ಇನ್ನೊಂದಷ್ಟು ವರ್ಷ ಬದುಕಿರ್ತಿದ್ರೇನೊ ನಮ್ಮಪ್ಪ... ಆ ಸರ್ಕಲ್ ವೋಟಲ್ ಐತಲ್ಲಾ ಅವನಿಂದನೇ...’

‘ಏನ್ಮಾಡ್ದ...’

‘ನಮ್ಮಪ್ಪ ಕಲೆಕ್ಷನ್ ಅಂತ ವೋಗವ್ರಲ್ಲ ಅವಾಗ ಮಿಕ್ಕಿದ್ದೂ ಪಕ್ಕಿದ್ದೂ, ತಂಗ್ಳು ಪಂಗ್ಳೂ, ಎಲ್ಲಾ ಪ್ಲೇಟ್ ಮೇಲೆ ಗುಡ್ಡೆ ಮಾಡಿ ಅದುರ್ಮೇಲೆ ನೀಟಾಗಿ ಈರುಳ್ಳಿ, ಕೊತ್ಮೀರಿ ಸೊಪ್ಪು ಉದುರ್ಸಿ ಬಿರ್ಯಾನಿ ಅಂತ ಮುಂದಿಕ್ಕವ್ನು... ನಮ್ಮಪ್ಪ ಅದನ್ನ ದಿನಾ ತಿಂದು ತಿಂದು ವೊಟ್ಟೆ ಮುನಿಸಿಪಾಲ್ಟಿ ತೊಟ್ಟಿ ಆಗೋಯ್ತು’.

‘ಆಮೇಲೆ...’

‘ಸರಿ, ನರ್ಸಿಂಗ್ ಹೋಂ ಸೇರುಸುದ್ವಾ... ಅಲ್ಲಿ ಡಾಕ್ಟರ್‌ಗುಳು ಆಪ್ರೇಷನ್ನು ಅಂತ ವೊಟ್ಟೆ ಓಪನ್ ಮಾಡಿ, ಒಳ್ಗೊಳ್ಗೆ ಪಾರ್ಟ್‌ಗುಳ್ನೆಲ್ಲಾ ವೊಡಕೊಂಡು, ಮತ್ತೆ ನೀಟಾಗಿ ಒಲ್ದು ಬ್ಯಾಂಡೇಜ್ ಬಟ್ಟೆ ಸುತ್ತಿ ವಾರ್ಡ್‌ಗಾಕುದ್ರು... ಮಾರ್ನೇ ದಿನನೇ ಏನ್ ಎಡವಟ್ಟಾಯ್ತೋ ಏನೊ, ತಿರ್ಗ ಓಟಿಗೆ ಕರಕೊಂಡೋಗಿ ನಮ್ಮಪ್ಪನ್ನ ಬಿಳಿ ಬಟ್ಟೇಲಿ ಸುತ್ತಿ ಕಳ್ಸುದ್ರು...’

ಒಂದು ದೀರ್ಘ ನಿಟ್ಟುಸಿರು.

‘ಸರಿ, ಈಗ ಸಮಾಧಾನ ಮಾಡ್ಕೊ... ನಾನು ಆಮೇಲೆ ಫೋನ್ ಮಾಡ್ತೀನಿ’.

ಮತ್ತೆ ಮಾಯಣ್ಣನ ತಂಡದ ಕಾರು ಬೆಂಗಳೂರಿನ ಕಡೆ ಹೊರಟಿತ್ತು.

‘ಸಾರ್, ಗಣಪತಿ ಹೇಳಿರೋದೆಲ್ಲಾ ನಿಜ... ಮೈಸೂರು ಉಪಶಮನ ಸೇವಾಕೇಂದ್ರದವರು ನನ್ನ ಫೋನ್‌ಗೆ ರೆಸ್ಪಾಂಡ್ ಮಾಡುದ್ರು ಈಗ... ಗಣಪತಿ ಆಸ್ತಿಪಾಸ್ತಿ ಎಲ್ಲಾ ಸೇವಾ ಕೇಂದ್ರಕ್ಕೆ ವರ್ಗಾವಣೆ ಪ್ರೊಸೆಸ್ ನಡಿತಾಯಿದೆ...’

‘ಹೌದು, ವಿನಯ್ ಆ ಸ್ಥಿತಿಯಲ್ಲಿರೋ ವ್ಯಕ್ತಿ ಈ ತರ ಯೋಚನೆ ಮಾಡೋಕೂ ಸಾಧ್ಯವಿಲ್ಲ... ಹಾಗೇ ಚಂದ್ರನ್, ಆಮೇಲೆ ರವಿಗೆ ಫೋನ್ ಮಾಡಿ ಸ್ಟ್ರಿಕ್ಟಾಗಿ ಹೇಳಿ, ನಾಳೆ ಬೆಂಗಳೂರಿಗೆ ಬೆಳಿಗ್ಗೆ ಬಂದು ನಮ್ಮ ಸ್ಟೇಷನ್ನಿನಲ್ಲಿ ಹೇಳಿಕೆ ಕೊಡಬೇಕಾಗುತ್ತೆ ಅಂತ’.

‘ಯೆಸ್ ಸಾರ್’

9

ಬೆಳ್ಳಂಬೆಳಿಗ್ಗೆಯೇ ಜಡಿ ಹಿಡಿದಿತ್ತು. ಇದೇ ಶುಕ್ರವಾರ, ಸರಿಸುಮಾರು ಇದೇ ಬೆಳಗಿನ ಸಮಯಕ್ಕೆ, ನಾಲ್ಕು ದಿನಗಳ ಹಿಂದೆ ಅಮ್ಮುವಿನ ಕೊಲೆಯಾಗಿದ್ದು, ಆದರೂ ಇನ್ನೂ ಯಾರೊಬ್ಬರ ಬಂಧನವೂ ಆಗಿರಲಿಲ್ಲ. ನಿಧಾನವಾಗಿ ಜನಾಭಿಪ್ರಾಯ ಪೊಲೀಸು ಇಲಾಖೆಯ ದಕ್ಷತೆಯನ್ನು ಅನುಮಾನಿಸಿ, ನಿಷ್ಕ್ರಿಯತೆಯನ್ನು ಆರೋಪಿಸುವಂತಾಗಿತ್ತು. ಪರೋಕ್ಷವಾಗಿ ಈ ಕೊಲೆಯ ತನಿಖಾಧಿಕಾರಿಯಾದ ಮಾಯಣ್ಣನ ವೃತ್ತಿಪರತೆಯು ಪ್ರಶ್ನೆಗೊಳಪಟ್ಟಿತ್ತು.

‘ವಿನಯ್, ಮೈಸೂರು ಉಪಶಮನ ಸೇವಾಕೇಂದ್ರಕ್ಕೆ ಫೋನ್ ಮಾಡಿ, ಗಣಪತಿ ಜೊತೆ ಮಾತಾಡೋಣ. ಹಾಗೇ ಆ ರೈಟರ್ ಕುಮಾರ್ ಎಲ್ಲೀ?’

‘ಇಲ್ಲೇ ರೆಕಾರ್ಡ್ ರೂಮಲ್ಲಿ ಇದ್ದ ಸಾರ್’.

ಕುಮಾರ್ ಎದುರಿಗೆ ಬಂದು ನಿಂತ.

‘ನಾವು ಕೊಲೆ ನಡೆದ ದಿನಾನೇ ತರಿಸಿದ ಜಯಂತ್ ಅವರ ಕಾಲ್ ರೆಕಾರ್ಡ್‌ಲ್ಲಾ ಚೆಕ್ ಮಾಡಿ ಅವರ ಎಲ್ಲಾ ಕಾಂಟಾಕ್ಟ್‌ಗಳ ಜೊತೆ ಮಾತಾಡಿ ಅಂತ ಹೇಳಿದ್ದೆ ನಿಮಗೆ’.

‘ಅವತ್ತಿನಿಂದ ಎಲ್ಲಾರ್ಗೂ ಫೋನ್ ಮಾಡ್ತಾನೇ ಇದ್ದೀವಿ ಸಾರ್, ಒಬ್ಬರಿಗೂ ಗೊತ್ತಿಲ್ಲ, ಅವರೆಲ್ಲಿದ್ದಾರೆ ಅಂತ... ಅವರ ಮನೆ ಅಕ್ಕಪಕ್ಕದವರೆಲ್ಲರ ಜೊತೆನೂ ಮಾತಾಡಿದ್ದೀನಿ ಸಾರ್... ಕಾರೂನೂ ಟ್ರೇಸಾಗಿಲ್ಲ ಸಾರ್’.

‘ಅವನ್ಯಾರೊ, ಜಯಂತ್ ಫ್ಯಾಕ್ಟರೀಲಿ ಫೋರ್‌ಮನ್ ಇದ್ದಾನಲ್ಲ... ಅವನನ್ನ ಕರೆಸಿ’.

‘ಯೆಸ್ ಸಾರ್’.

‘ಸಾರ್, ಗಣಪತಿ ಲೈನಲ್ಲಿದ್ದಾರೆ’ ಎನ್ನುತ್ತಾ ವಿನಯ್ ಫೋನ್ ಕೈಗಿತ್ತ.

‘ಗಣಪತಿ... ಕೊಡಗನ್ನ ಮಿಸ್ ಮಾಡ್ಕೊಳ್ತಾ ಇದ್ದೀರಾ?’

‘ನನ್ನ ಇಡೀ ಜೀವನ ಕೊಡಗಲ್ಲೇ ಅಲ್ಲವೇ... ಆದರೆ ಒಂದು ಬಹಳ ಮುಖ್ಯವಾದದ್ದು ಮರೆತು ಬಂದೆ... ಅಮ್ಮು ಸಮಾಧಿ ಒಮ್ಮೆ ನೋಡಿ ಬರಬೇಕಿತ್ತು. ಆ ಹುಡುಗಿ ನನ್ನ ತಾಯಿಯ ನೆನಪನ್ನು ಮತ್ತೆ ತಂದುಕೊಟ್ಟವಳು. ಎಷ್ಟು ಗಾಢವಾಗಿ ಅಂದರೆ, ಆ ನೆನಪೇ ನನ್ನ ಉಳಿದ ದಿನಗಳ ಸಂಗಾತಿ. ಮಂಟಪದ ಮೇಲೆ ಕೋವಿ ಹಿಡಿದು ನಿಂತ ಅಮ್ಮುವಿನ ಆ ಭಂಗಿ, ಎಷ್ಟೋ ವರ್ಷಗಳ ಹಿಂದೆ ತೀರಿಕೊಂಡ ನನ್ನ ತಾಯಿ ಅಂದು ಮತ್ತೆ ಬಂದು ಎದುರಿಗೆ ನಿಂತಂತಾಗಿತ್ತು’.

‘ಅದೇನು ಸ್ವಲ್ಪ ವಿವರವಾಗಿ ಹೇಳಿ’

ಗಣಪತಿ ಪುತ್ತರಿ ಹಬ್ಬದ ಹಿಂದಿನ ದಿನ ಮಂಟಪದ ಮೇಲೆ ನಡೆದ ಆ ಇಡೀ ಘಟನೆಯನ್ನು ಸವಿಸ್ತಾರವಾಗಿ ಮಾಯಣ್ಣನಿಗೆ ನಿರೂಪಣೆ ಮಾಡಿದ್ದ.

‘ಹೇಗಿದೆ ಹೊಸ ಜಾಗ ಗಣಪತಿ?’

‘ಭೋಗ ಜೀವನಕ್ಕೆ ಒಗ್ಗಿದ್ದ ಜೀವ. ಈಗ ಈ ಸರಳ ಜೀವನದ ದಿನಚರಿ. ಅಡ್ಡಿಯಿಲ್ಲ. ಎದೆಗೂಡಿನಲ್ಲಿ ಕ್ಯಾನ್ಸರ್‌ನ ಯಮಯಾತನೆ ಎಲ್ಲವನ್ನ ಮರೆಸುತ್ತೆ. ಹೇಳಿ ಏನು ವಿಷಯ?’

‘ವಿಜಯಮ್ಮನವರ ತಮ್ಮ ರವಿ ಹತ್ತಿರ ಒಂದು ನಕಲಿ ವಿಲ್ ಇದೆಯಂತೆ, ಅಮ್ಮು ಅವರು ಬರೆದು ಹೋದ ಹಾಗೆ... ಅದರ ಬಗ್ಗೆ...’

‘ಅದರ ಮುಖ್ಯ ರೂವಾರಿ ಅವನೇ. ನನ್ನದು